# ಕನಕದಾಸರ ಕೀರ್ತನೆಗಳಲ್ಲಿನ ಪಾರಂಪರಿಕ ಹಾಗೂ ಆಧುನಿಕ ಅಂಶಗಳು

**ಕವಿತಾ ಬಾಯಿ**

ಸಂಶೋಧನ ವಿದ್ಯಾರ್ಥಿ, ಸಂತ ಜೋಸೆಫ್ಸ್ ವಿಶ್ವವಿದ್ಯಾನಿಲಯ, ಬೆಂಗಳೂರು.

DOI: https://doi.org/10.5281/zenodo.15795660

## ABSTRACT:

ಕನಕದಾಸರು (1509–1609) ಕನ್ನಡದ ಪ್ರಸಿದ್ಧ ಹರಿದಾಸರು, ಭಕ್ತಿಪಂಥದ ಪ್ರಮುಖ ಶರಣರು, ಕವಿಗಳು ಮತ್ತು ದಾರ್ಶನಿಕರು. ಅವರು ವಿಷ್ಣುವಿನ ಭಕ್ತರಾಗಿದ್ದು, ವಿಷ್ಣುಭಕ್ತಿಯಿಂದ ತುಂಬಿದ ಹಲವಾರು ಕೀರ್ತನೆಗಳು, ಉಗಾಭೋಗಗಳು, ಹರಿಕಥೆಗಳು ಮತ್ತು ತಾತ್ವಿಕ ಬರಹಗಳನ್ನು ರಚಿಸಿದ್ದಾರೆ. “ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು” ಎಂಬ ಕೀರ್ತನೆಯ ಸಾಲು ಸಮಾಜದ ಒಳಿತಿಗೆ ಧರ್ಮಾಚರಣೆಯ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಕನ್ನಡದಲ್ಲಿ ದಾಸವಾಙ್ಮಯದ ದೊಡ್ಡ ಭಂಡಾರವಿದೆ. ಕೀರ್ತನ ಸಾಹಿತ್ಯ ಕನ್ನಡ ಜನತೆಯ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಕನಕದಾಸರ ಕೀರ್ತನೆಗಳಲ್ಲಿ ತತ್ವಚಿಂತನೆಯ (ದಾರ್ಶನಿಕ) ಅಂಶಗಳು ತುಂಬಾ ಪ್ರಬಲವಾಗಿವೆ. ಅವರು ಭಕ್ತಿ ಭಾಷೆಯಲ್ಲಿ ಸಾಮಾನ್ಯ ಜನರಿಗೂ ತಲುಪುವ ರೀತಿ ತಮ್ಮ ತಾತ್ವಿಕ ವಿಚಾರಗಳನ್ನು ಮಂಡಿಸುತ್ತಾರೆ. ಈ ಕೀರ್ತನೆಗಳು ಅತೀವ ಭಾವನಾತ್ಮಕವಾಗಿದ್ದರೂ, ಅದರಲ್ಲಿ ದಾರ್ಶನಿಕವಾದ, ನೈತಿಕತೆ, ಶರಣಪಥ, ಅಹಂಕಾರತ್ಯಾಗ, ಜಗತ್ತಿನ ನಾಶವರ್ತಿತ್ವ ಇತ್ಯಾದಿ ಮಹತ್ವದ ವಿಚಾರಗಳು ಇಲ್ಲಿವೆ. ಸಂಸಾರದ ಅಶಾಶ್ವತತೆಯನ್ನು ಎತ್ತಿ ಹಿಡಿದು ಆ ಮೂಲಕ ಲೌಕಿಕ ಆಸೆ ಆಮಿಷಗಳಲ್ಲಿ ತುಂಬಿ ತುಳುಕುವ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸುವ ಉತ್ತಮ ಸಾಧನವೆಂಬುದನ್ನು ಮನಗಂಡು ಕೀರ್ತನೆಗಳನ್ನು ರಚಿಸಿದರು. ವೈಯಕ್ತಿಕ ಮೋಕ್ಷವಲ್ಲದೆ ಸಾಮಾಜಿಕ ವಿಮುಕ್ತಿಗೂ, ಸಮಾಜದ ಉನ್ನತಿಗೂ ಪ್ರಯತ್ನಿಸಿದ ಈ ಭಕ್ತ ಪರಂಪರೆಯ ದೃಷ್ಟಿ ವಿಶಿಷ್ಟವಾದುದು ಮತ್ತು ಸಾಮಾಜಿಕವಾಗಿ ಮಹತ್ವಪೂರ್ಣವಾದದ್ದು. ಈ ಹಿನ್ನೆಲೆಯಲ್ಲಿ ಸಂಶೋಧನಾ ಪ್ರಬಂಧ ಸಂರಚನೆಗೊಂಡಿದೆ.

## KEYWORDS:

ದಾಸ ವಾಙ್ಮಯ, ರಸಾಮೃತ, ಜಾಯಮಾನ, ನುಡಿಗಟ್ಟು, ವಿಶ್ವಮಾನವ, ಯೋಗಪುರುಷ.

‘‘ಧರ್ಮವಿಲ್ಲದ ಅರಸು ಮುರಿದ ಕಾಲಿನ ಹೊರಸು’’ ಎಂಬ ಕೀರ್ತನೆಯ ಸಾಲು ಸಮಾಜದ ಒಳಿತಿಗೆ ಧರ್ಮಾಚರಣೆಯ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಸರಿಯಾದ ಜೀವಿಸುವ ಮಾರ್ಗವನ್ನು ಹುಡುಕುವಲ್ಲಿ ಮಾನವನು ಕಂಡಂತಹ ಮಾರ್ಗಗಳಲ್ಲಿ ಈ ಕೀರ್ತನೆಯು ಒಂದು. ವ್ರತ ನಿಯಮಗಳನ್ನು ಪಾಲಿಸುತ್ತಾ ದೇವರ ನಾಮಗಳನ್ನು ಹಾಡುವ ಪದ್ಧತಿ ಪ್ರಾಚೀನ ಪರಂಪರೆಯಿಂದ ಹಿಡಿದು ಆಧುನಿಕ ಸಮಾಜದವರೆಗೂ ವ್ಯಾಪಿಸಿದೆ. ಮಾನವ ಸೃಷ್ಟಿಗೊಂಡಾಗಿನಿಂದಲೂ ದೇವರನ್ನು ಕಂಡುಕೊಳ್ಳುವ ಪ್ರಯತ್ನವನ್ನು ನಡೆಸಿಕೊಂಡು ಬಂದಿದ್ದಾನೆ. ತಮ್ಮ ಕಾವ್ಯದ ಆರಂಭದಲ್ಲಿ ಕವಿಗಳು ತಮ್ಮ ಇಷ್ಟದೇವರುಗಳನ್ನು ಹಾಡಿ ಹೊಗಳಿ ತಮ್ಮ ಕಾವ್ಯಗಳಲ್ಲಿ ಯಶಸ್ಸನ್ನು ಕರುಣಿಸುವಂತೆ ಹಾಡಿಕೊಂಡದ್ದೂ ಉಂಟು. ಈ ಗುಂಪಿಗೆ ಸೇರುವಂತಹದು ಕನ್ನಡ ಕೀರ್ತನ ಸಾಹಿತ್ಯ. ಭಕ್ತಿ ಮಾರ್ಗ ಪರಂಪರೆಗಳು ಅನೇಕ ವಿಧ. ಶಾಕ್ತ, ಶೈವ, ವೈಷ್ಣವ ಎಂಬ ಮೂರು ಪಂಥಗಳು ವಿಶೇಷವಾಗಿ ಗುರುತಿಸಲ್ಪಟ್ಟಿವೆ. ಇವುಗಳಲ್ಲಿ ಸ್ವಾಮಿಭೃತ್ಯಭಾವ, ಸಖ್ಯ ಭಾವ, ಸತಿ–ಪತಿ ಭಾವಗಳು ಪ್ರಚಲಿತವಾಗಿವೆ. ಕನ್ನಡದಲ್ಲಿ ದಾಸವಾಙ್ಮಯದ ದೊಡ್ಡ ಭಂಡಾರವಿದೆ. ಭಕ್ತಿಯೋಗದ ಮೇಲೆ ಅದು ಸಂಗೀತದ ಭಾಷ್ಯ. ಭಕ್ತರ ಹಣ್ಣಾದ ಅಂತಃಕರಣದಿಂದ ಹೊರಸೂಸುವ ತನಿರಸ. ಇಲ್ಲಿ ಭಕ್ತಿ ರಸಾಮೃತ ಹೊನಲಾಗಿ ಹರಿದಿದೆ. ಹರಿಭಕ್ತಿ ಇದ್ದರೆ ಆತ್ಮದ ಉದ್ಧಾರ ಎಂಬುದು ದಾಸವರೇಣ್ಯರ ನಂಬಿಕೆ. ಹರಿನಾಮ, ಹರಿಪಾದ, ಹರಿತೀರ್ಥವಿರಲು ದುರಿತದ ಭಯವೇಕೆ? ನರಕದ ಭೀತಿ ಯಾಕೆ? ಎಂಬುದು ದಾಸರ ವಿಶ್ವಾಸ. ‘‘ಕಾಗಿನೆಲೆಯಾದಿ ಕೇಶವನ ಭಕ್ತ ಮುಕ್ತ’’ ಎಂಬುದು ಕನಕದಾಸರ ಅಭಿಪ್ರಾಯ.

ಕೀರ್ತನ ಸಾಹಿತ್ಯ ಕನ್ನಡ ಜನತೆಯ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಭಗವಂತನನ್ನು ಕುರಿತು ಭಕ್ತನು ತಳೆಯುವ ತನ್ಮಯತೆ ತೀವ್ರವಾಗಿ ಹಾಡಾಗಿ ಹೊಮ್ಮುತ್ತದೆ. ಹಾಡಿ ಹೊಗಳು ಎಂಬ ನುಡಿಗಟ್ಟೊಂದು ಕನ್ನಡ ಜಾಯಮಾನದಲ್ಲಿ ಉಂಟು. ಕೀರ್ತನೆಯು ಈ ತೆರನ ಹಾಡಿ ಹೊಗಳುವ ವಿಧಾನ. ಭಕ್ತ ಭಗವಂತನನ್ನು ಹಾಡಿ ಹೊಗಳಿ ತನ್ನ ಸ್ಥಿತಿಯನ್ನು ಉತ್ತಮಗೊಳಿಸುವಂತೆ ಪ್ರಾರ್ಥಿಸುವನು. ಭಕ್ತನ ಈ ಹಾಡು ಹಣ್ಣಾಗಿ ಭಗವಂತನ ಕುರಿತ ಹಾಡಾಗಿ ಹೊಮ್ಮುತ್ತದೆ. ಈ ದಿಶೆಯಲ್ಲಿ ಕೀರ್ತನೆಗಳು ಅರಳುತ್ತಾ ಹೋದವು. ಭಕ್ತಿಯೇ ಕೀರ್ತನೆಗಳಲ್ಲಿ ಮುಖ್ಯವಾದಂತಹ ಭಾವ. ಸತ್ಯದ ಅರಿವಿನ ಭಾವನೆ ಜಾಗೃತವಾದಂತೆ ಹಾಡಿನ ರೂಪದಲ್ಲಿ ಭಕ್ತಿ ಮಾರ್ಗವನ್ನು ಅಳವಡಿಸಿಕೊಂಡನು. ಇಲ್ಲಿ ಏಕದೇವನಿಷ್ಠೆಯನ್ನು ನಾವು ಸಾಮಾನ್ಯವಾಗಿ ಕಾಣಬಹುದಾದಂತಹ ಸ್ವರೂಪವಾಗಿದೆ. ತಮ್ಮ ಇಷ್ಟ ದೇವತೆಯನ್ನು ಒಲಿಸಿಕೊಳ್ಳಲು ಭಾವಪೂರ್ಣ ಹಾಡಿನ ಮೂಲಕ ಸಾಧಿಸಿಕೊಳ್ಳಬಹುದೆಂಬ ಸಾಧ್ಯತೆಯನ್ನು ಸಮಾಜಕ್ಕೆ ನೀಡಿದರು ಕೀರ್ತನಾಕಾರರು. ಸಂಸಾರದ ಅಶಾಶ್ವತತೆಯನ್ನು ಎತ್ತಿ ಹಿಡಿದು ಆ ಮೂಲಕ ಲೌಕಿಕ ಆಸೆ ಆಮಿಷಗಳಲ್ಲಿ ತುಂಬಿ ತುಳುಕುವ ಮನಸ್ಸನ್ನು

ಭಗವಂತನ ಕಡೆಗೆ ತಿರುಗಿಸುವ ಉತ್ತಮ ಸಾಧನವೆಂಬುದನ್ನು ಮನಗಂಡು ಕೀರ್ತನೆಗಳನ್ನು ರಚಿಸಿದರು. ವೈಯಕ್ತಿಕ ಮೋಕ್ಷವಲ್ಲದೆ ಸಾಮಾಜಿಕ ವಿಮುಕ್ತಿಗೂ, ಸಮಾಜದ ಉನ್ನತಿಗೂ ಪ್ರಯತ್ನಿಸಿದ ಈ ಭಕ್ತ ಪರಂಪರೆಯ ದೃಷ್ಟಿ ವಿಶಿಷ್ಟವಾದುದು ಮತ್ತು ಸಾಮಾಜಿಕವಾಗಿ ಮಹತ್ವಪೂರ್ಣವಾದದ್ದು.

ಹರಿದಾಸರು 15–16ನೇ ಶತಮಾನದಲ್ಲಿ ಗಳಿಸಿದ ಕೀರ್ತಿಯನ್ನು ಶರಣರು ಹನ್ನೆರಡನೇ ಶತಮಾನದಲ್ಲಿ ಗಳಿಸಿದ್ದರು. ಶಿವಶರಣರು ಹಾಡಿನ ಮೂಲಕ ಪರಂಪರೆಯನ್ನು ಉಳಿಸಿ ಬೆಳೆಸಿದ್ದರು. ಬಸವಾದಿ ಪ್ರಮಥರು ಕನ್ನಡ ಕೀರ್ತನ ಸಾಹಿತ್ಯದ ಪ್ರವರ್ತಕರು ಎನಿಸಿದರು. ಆದರೂ ಈ ಪರಂಪರೆಗೆ ಒಂದು ಮಹಾಪೂರವನ್ನು ತಂದುಕೊಟ್ಟವರು ಕೀರ್ತನಕಾರರೆಂದೇ ಪ್ರಸಿದ್ಧರಾದ ಹರಿದಾಸರು. ಸುಮಾರು 13, 14ನೇ ಶತಮಾನದಲ್ಲಿದ್ದ ನರಹರಿ ತೀರ್ಥರು ಹರಿದಾಸ ಕೀರ್ತನ ಪರಂಪರೆಯ ಆದ್ಯ ಕೃತಿಕಾರರು. ಇವರು ಹಾಡಿದ ಮೂರು ಹಾಡುಗಳು ಉಪಲಬ್ಧವಿದೆ. ಹದಿನಾರನೇ ಶತಮಾನದಲ್ಲಿ ವ್ಯಾಸರಾಯರ ನೇತೃತ್ವದಲ್ಲಿ ದಾಸ ಸಾಹಿತ್ಯ ಮಹಾಪೂರದಂತೆ ಹರಿದು ಬಂದಿತು. ಪುರಂದರದಾಸ, ಕನಕದಾಸ ಮೊದಲಾದವರು ಅಸಂಖ್ಯಾತ ಕೀರ್ತನೆಗಳನ್ನು ರಚಿಸಿ ಹರಿದಾಸ ಸಾಹಿತ್ಯದಲ್ಲಿ ಹೊಸ ಆಯಾಮವನ್ನು ಕಲ್ಪಿಸಿದರು.

ದಾಸವಾಙ್ಮಯದಲ್ಲಿ ಪುರಂದರದಾಸರಂತೆ ಅಗ್ರಮಾನ್ಯನೆನಿಸಿದವನು ಕನಕದಾಸ. ಪುರಂದರ ಹಾಗೂ ಕನಕದಾಸರನ್ನು ವ್ಯಾಸರಾಯರ ಶಿಷ್ಯರೆಂದು, ದಾಸ ಪಂಥದ ಅಶ್ವಿನಿ ದೇವತೆಗಳೆಂದು ಕರೆಯಲಾಗುತ್ತಿದೆ. ಕನಕದಾಸರ ಭಕ್ತಿ ಕೇವಲ ಕೀರ್ತನೆಗಳಲ್ಲಿ ಅಲ್ಲದೆ, ಅವರ ಕಾವ್ಯ ಕೃತಿಗಳಲ್ಲಿಯೂ ವ್ಯಕ್ತವಾಗಿವೆ. ಪುರಂದರ ಮೊದಲಾದ ಇತರ ಹರಿದಾಸರು ಕನಕದಾಸರಂತೆ ಕಾವ್ಯ ರಚನೆ ಮಾಡಿಲ್ಲ. ಈ ದೃಷ್ಟಿಯಿಂದ ಕನಕದಾಸ ಸಾಹಿತ್ಯ ಕ್ಷೇತ್ರದಲ್ಲಿ ನೇರವಾಗಿ ಸೇವೆ ಸಲ್ಲಿಸಿದ್ದಾನೆ. ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತ್ರೆ, ಹರಿಭಕ್ತಿಸಾರ ಇವು ಕನಕನಿಂದ ರಚಿಸಲ್ಪಟ್ಟ ಕೃತಿಗಳು. ಕನಕದಾಸರ ಕೀರ್ತನೆಗಳಲ್ಲಿ ಆತನ ಆರಾಧ್ಯ ದೈವ ಕಾಗಿನೆಲೆಯಾದಿ ಕೇಶವ ಎಂಬ ಅಂಕಿತವಿದೆ. ಕನಕದಾಸ ಅವರು ಕವಿಯು ಹೌದು, ಕೀರ್ತನಕಾರನು ಹೌದು, ಸಂತನು ಹೌದು. ಯಾವ ಮತವನ್ನು ಬಿಡದೆ, ಯಾವ ಮತಕ್ಕೂ ಅಂಟಿಕೊಳ್ಳದೆ ಸಕಲ ತತ್ವಗಳನ್ನು ಮೀರಿ ಬೆಳೆದು ವಿಶ್ವಮಾನವನಾಗಿ ವಿಜೃಂಭಿಸಿದ ಯೋಗಪುರುಷ.

**ಕನಕದಾಸರ ಕೀರ್ತನೆಗಳಲ್ಲಿ ಪಾರಂಪಾರಿಕ ಅಂಶಗಳು:**

ದಲಿತ ವರ್ಗಕ್ಕೆ ಸೇರಿದವನಾದರೂ ಧರ್ಮ ಕರ್ಮ ಸಂಯೋಗದಿಂದ ನಾಡುಕಟ್ಟುವ ವಣೆಯನ್ನು ಏರಿ ಶೌರ್ಯ ಪ್ರತಾಪಗಳನ್ನು ಮರೆದ ವೀರಾಗ್ರಣಿಯೂ

ಹೌದು. ಕುಟುಂಬದಲ್ಲಿ ಉಂಟಾದ ನಿರಾಶೆಯೋ, ಯುದ್ಧದಲ್ಲಿ ಕಣ್ಣಾರೆ ಕಂಡ ಸಾವು ನೋವೋ, ಗುರುಗಳ ಕರೆಯೋ, ವಿಶ್ವಶಕ್ತಿಯ ಪ್ರೇರಣೆಯೋ ಕಾರಣವಾಗಿ ದೊರೆತನವನ್ನು ತಿರಸ್ಕರಿಸಿ ಹರಿದಾಸರ ಸಂಸರ್ಗದಿಂದ ಧನ್ಯನಾದನು. ಭೇದರಹಿತ ಕೃತ್ಯೋಪಾಸಕರಾಗಿ ಆಧ್ಯಾತ್ಮಸಿದ್ಧಿಯ ಶಿಖರವನ್ನೇರಿದ ಮಹಾಯೋಗಿ, ವೈರಾಗ್ಯ ಶಿಖಾಮಣಿ ಕನಕದಾಸ. ಕನಕದಾಸರ ಊರು ಧಾರವಾಡದಲ್ಲಿ ಬಾಡ ಎಂಬ ಗ್ರಾಮ. ತಾಯಿ ಬಚ್ಚಮ್ಮ, ತಂದೆ ಬೀರಪ್ಪ. ವಿಜಯನಗರ ಸಾಮ್ರಾಜ್ಯಕ್ಕೆ ನಿಷ್ಠಾವಂತನಾಗಿದ್ದ ಬೀರಪ್ಪ. ತಿರುಪತಿಯ ತಿಮ್ಮಪ್ಪನ ವರದಿಂದ ಹುಟ್ಟಿದ ಮಗುವಿಗೆ ತಾಯಿ ತಿಮ್ಮಪ್ಪನೆಂದೇ ಹೆಸರಿಟ್ಟಳು. ತಂದೆಯ ನಂತರ ಆ ಸ್ಥಾನವನ್ನು ಸಮರ್ಥವಾಗಿ ತುಂಬುವನು ತಿಮ್ಮಪ್ಪ. ಪಂಪನಂತೆ ಈತ ಕಲಿಯೂ ಹೌದು, ಕವಿಯೂ ಹೌದು. ಈತನ ದೇಹ ವಿದ್ಯೆಯ ಜೊತೆಗೆ ದೈವ ವಿದ್ಯೆಯೂ ಬೆಳೆಯುತ್ತದೆ. ತಿರುಪತಿಗೆ ಮೇಲಿಂದ ಮೇಲೆ ಹೋಗಿ ಬರುತ್ತಿದ್ದುದರಿಂದ ರಾಮಾನುಜ ಪರಂಪರೆಯ ತಾತಾಚಾರ್ಯರ ಪರಿಚಯವಾಗಿ, ಗಾಢಭಕ್ತಿಯಾಗಿ ಬೆಳೆದು ಶರಣ್ಯಭಾವವಾಗಿ ಪರಿಣಮಿಸುತ್ತದೆ.

ವಿಜಯನಗರಕ್ಕೆ ಕಾರ್ಯನಿಮಿತ್ತ ಹೋಗುತ್ತಿರುವಾಗ ಅಲ್ಲಿನ ವ್ಯಾಸರಾಯರ ಮಹಿಮೆಗೆ ಬೆರಗಾಗಿ ಮಾರು ಹೋಗುತ್ತಾನೆ. ಬಾಡಕ್ಕಿಂತ ಹೆಚ್ಚಾಗಿ ಕಾಗಿನೆಲೆಯಲ್ಲಿದ್ದು ಆದಿಕೇಶವ, ನೃಸಿಂಹ ದೇವಾಲಯಗಳನ್ನು ನಿರ್ಮಿಸುತ್ತಾನೆ. ನೃಸಿಂಹ ವಿಗ್ರಹವನ್ನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಈತನಲ್ಲಿದ್ದ ಕವಿ ಜಾಗೃತನಾಗಿ 'ನೃಸಿಂಹ ಸ್ತವ' ಹಾಡುಗಬ್ಬ ರೂಪದಲ್ಲಿ ಮೂಡಿಬರುತ್ತದೆ. ಈ ಕಾವ್ಯಧಾರೆ ಅವನಲ್ಲಿ ಅವಿಚ್ಛಿನ್ನವಾಗಿ ಪ್ರವಹಿಸಿ ಮೋಹನ ತರಂಗಿಣಿ ಕಾವ್ಯ ರಚನೆಯಾಗುತ್ತದೆ. ಈ ಸಂದರ್ಭದಲ್ಲಿ ಆತನ ಮನಸ್ಸು ಐಹಿಕ ಭೋಗ ಸಂಪತ್ತುಗಳಿಂದ ವಿಮುಖವಾಗುತ್ತದೆ. ವ್ಯಾಸರಾಯ, ತಾತಾಚಾರ್ಯ, ವಾದಿರಾಜರ ಸಂಪರ್ಕದಿಂದ ಸಂತ ಕವಿ ತಿಮ್ಮಪ್ಪನಲ್ಲಿ ಜಾಗೃತನಾಗುತ್ತಾನೆ. ಅನೇಕ ಕೀರ್ತನೆಗಳು ಈತನಿಂದ ಸೃಷ್ಟಿಯಾದುವು. ಕುಲಾಚಾರದ ಬಗೆಗೆ ಬೇಸತ್ತಿದ್ದ ಈತ''ಕುಲ ಕುಲವೆಂದು ಬಡಿದಾಡದಿರಿ, ಕುಲದ ನೆಲೆಯನೇನಾದರೂ ಬಲ್ಲಿರಾ?'' ಎಂದು ಕುಲಾಚಾರವನ್ನು ಖಂಡಿಸುವನು. ಸಂಸಾರ ವಿಮುಖನಾದ ಈತ 'ನೆಚ್ಚದಿರು ಸಂಸಾರ ನೆಲೆಯಲ್ಲವೀ ಕಾಯ' ಎಂದೂ, ಸಿರಿಯ ಅಸ್ಥಿರತೆಯನ್ನು ಕುರಿತು 'ನಂಬಬೇಡಿ ಸಿರಿಯು ತನ್ನದೇ? ಸಿರಿಯ ನಂಬಿ ಹಿಗ್ಗಲಿ ಬೇಡ ಮನವೆ' ಎಂದು ಹಾಡಿದ್ದಾನೆ. ಆಚರಣೆಗಳಲ್ಲಿನ ಡಂಭಾಚಾರವನ್ನು ಗಮನಿಸಿ, 'ಜಪ ಮಾಡಿದರೇನು? ಕಪಟ ಗುಣ ವಿಪರೀತ ಕಲುಷವಿದ್ದವರು' ಎಂದು ಪ್ರಶ್ನಿಸಿ 'ನೇಮವಿಲ್ಲದ ಹೋಮವೇಕಯ್ಯಾ' ಎಂದು ಹೇಳುತ್ತಾರೆ. ಇಡೀ ಮನುಕುಲವನ್ನು ಸಮಷ್ಟಿಯಾಗಿ ಕಾಣುವ ಕನಕದಾಸರು ಎಲ್ಲರೂ ಸಮಾನರು ಎಂದು ಸಾರಲು:

**ಅಲ್ಲಾಖುದಾ ಎಂಬ ಅರ್ಥವನು ಅರಿಯದೆ,**

**ಮುಲ್ಲಾ ಶಾಸ್ತ್ರದ ನೆಲೆಯ ಮುನ್ನರಿಯದೆ,**
**ಕಳ್ಳಕೂಗನೆ ಕೂಗಿ ಬೊಗಳಿ ಬಾಯ್ದೆರೆವಂತ**
**ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ?**
**ಲಿಂಗಾಂಗ ದೊಳಗಿರುವ ಅನುಭವವ ತಿಳಿಯದೆ,**
**ಅಂಗಲಿಂಗದ ನೆಲೆಯರಿಯದೆ,**
**ಜಂಗಮ ಸ್ಥಾವರದ ಹೊಲಬನರಿಯದ ಇಂಥ**
**ಭಂಗಿ ಮುಕ್ಕುಗಳೆಲ್ಲ ಲಿಂಗವಂತರುಹುದೆ.**

ಎಂದು ಹಾಡಿದ್ದಾರೆ.

ಸಮಾಜದಲ್ಲಿನ ಅಂಧ ಆಚರಣೆಗಳನ್ನು ಟೀಕಿಸಿ ನೂರಾರು ಹಾಡುಗಳನ್ನು ಹಾಡಿದ ಕನಕದಾಸರು ಸತ್ಯಸಂಧರು. ಅವರ ಕಣ್ಣು ಮನಸ್ಸು ಹಾಯ್ದೆಡೆಲ್ಲಿ ಸತ್ಯ ಗೋಚರಿಸುವುದು. ಈ ದೇಹ ರಕ್ಷಣೆಗೆ ದುಡಿಮೆ ಮೊದಲು ಎಂದು ಮನಗಂಡು, ''ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು'' ಎಂದು ಹಾಡಿದ್ದಾರೆ. ಸಾವು ನಿತ್ಯ ಸತ್ಯವೆಂದು ಮನಗಂಡು, 'ಸತ್ತವರಿಗಳಲೇಕೆ ತನ್ನನು ಹೆತ್ತವರು – ಹೊತ್ತವರುಗಳು ಸತ್ತು ಹೋಗುವರಲ್ಲದುಳಿವರೆ' ಎಂದು ಸಾವಿನ ಅನಿವಾರ್ಯತೆಯನ್ನು ಸೂಚಿಸುತ್ತಾರೆ. ಮಾನವನಾಗಿ ಹುಟ್ಟಿದ ಮೇಲೆ ತನ್ನ ತಾನರಿಯದಿದ್ದರೆ ಮನುಷ್ಯ ಪ್ರೌಢನಾಗಲಾರ ಎಂಬುದು ಕನಕದಾಸರ ದೃಢನಿಲುವು. ಪ್ರಾಚೀನ ಕರ್ಮದಲ್ಲಿ ವಿಶ್ವಾಸವುಳ್ಳ ಕನಕದಾಸರು, ''ಪ್ರಾಚೀನ ಕರ್ಮವಿದು ಬಿಡಲರಿಯದು''; ತಾನು ಮಾಡಿದ ಕರ್ಮದ ಫಲ ಬೇಡವೆಂದರೂ ಬಿಡದು 'ಒಲ್ಲೆನೆಂದರಾಗುವುದೇ ಅಲ್ಲಿ ಪಡೆದು ಬಂದುದನು. ಎಲ್ಲವನುಂಡು ತೀರಿಸಬೇಕು ಮನವೆ' ಎಂದು ಸಾಂತ್ವನ ಹೇಳುತ್ತಾರೆ. 'ಭಗವಂತ ಕೃಪೆಯಾಗದಿದ್ದಾಗ ಸಾತ್ವಿಕ ಕೋಪ ವ್ಯಕ್ತಮಾಡುತ್ತಾರೆ. 'ಹುಟ್ಟಿಸಲು ಬೇಡವಿನ್ನು ಹುಟ್ಟಿಸಿದಕ್ಕೆ ಪಾಲಿಸಿನ್ನು': ಆ ವೇಳೆಯಲ್ಲಿ ಆಧಾರ ಕಾಯ್ದೆಯೋ ದೇವ. ಈ ವೇಳೆಯಲಿ ಎನ್ನ ಕಾಯ್ದರದು ನಿಜವಹುದು. 'ಆವ ಸಿರಿಯಲಿ ನೀನು ಎನ್ನ ಮರೆತ'; 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ', ಎನ್ನುವಾಗ ಅವರ ಕೋಪ, ಆಕ್ಷೇಪಗಳು ವ್ಯಕ್ತವಾಗುತ್ತವೆ. ತಾನು ತಾತಾಚಾರ್ಯ, ವ್ಯಾಸರಾಯ, ವಾದಿರಾಜರನ್ನು ಗುರುಸ್ಥಾನದಲ್ಲಿಟ್ಟು ಪೂಜಿಸಿದರೂ ಯಾರಿಂದಲೂ ದೀಕ್ಷೆ ಪಡೆಯಲಿಲ್ಲವೆಂದು ಕೊರಗುವರು. ಯಾವ ನಿರ್ಬಂಧಕ್ಕೂ ಒಳಗಾಗದೆ, ಯಾವ ಧರ್ಮಸಿದ್ಧಾಂತದ ಸುಳಿಗೆ ಸಿಕ್ಕದೆ. ಒಳ್ಳೆಯದನ್ನು ಬಿಡದೆ, ಎಲ್ಲ ಮತ ತತ್ವಗಳ ಕೂಡಲಸಂಗಮವಾಗಿದ್ದು ಏಕಮೇವಾದ್ವಿತೀಯವಾದ ಸಿದ್ಧಿ ಪಡೆದ ಮಹಾ ಸಂತರು ಕನಕದಾಸರು. ಎಲ್ಲವನ್ನೂ ಸಮಾನವಾಗಿ ಕಾಣುವ ಈ ಸಂತಶ್ರೇಷ್ಠರಿಗೆ ದರ್ಶನಾನುಭವವಾಗಿದೆ. 'ತಾನಾರು ದೇಹವಾರು, ದಿವ್ಯಜ್ಞಾನದಲಿ ತಿಳಿದಾತ ಪರಮ ಯೋಗಿ', 'ನಾನು ನೀನು ಎನ್ನದಿರೋ ಹೀನ ಮಾನವ': 'ಜ್ಞಾನದಿಂದ ನಿನ್ನ ನೀನೇ ತಿಳಿದು ನೋಡಲೋ ಪ್ರಾಣಿ' ಎಂದು ಎಚ್ಚರಿಸುವರು. 'ಇಲ್ಲಿಹನು ಅಲ್ಲಿಲ್ಲವೆಂಬೀ ಸೊಲ್ಲುಸಲ್ಲದು ಹೊರಗೊಳಗೆ ನೀನಲ್ಲದಿಲ್ಲ ಎಂಬ ದರ್ಶನಾನುಭವ ಕನಕದಾಸರದು.

ಅವರ ಜೀವನದ ಆದ್ಯ ಗುರಿ ಕಾವ್ಯ ರಚನೆಯಲ್ಲ ಆಧ್ಯಾತ್ಮ ಸಾಧನೆ ಎಂಬುದು ಇದರಿಂದ ತಿಳಿಯುತ್ತದೆ.

ಹರಿಹರರಲ್ಲಿ ಭೇದವಿಲ್ಲವೆಂದು ಸ್ಥಾಪಿಸಲು ಹೆಣಗಿದರು ಕನಕದಾಸರು ಎಂಬುದು ಮೋಹನ ತರಂಗಿಣಿಯಲ್ಲಿ ಸ್ಪಷ್ಟವಾಗುತ್ತವೆ. ರಾಮಧಾನ್ಯ ಚರಿತ್ರೆಯಲ್ಲಿ ವರ್ಗಜಾತಿಗಳ ಹೋರಾಟದ ಚಿತ್ರವಿದೆ. ತಾನು ಹುಟ್ಟಿದ ಜಾತಿ ಕಾರಣವಾಗಿ ತಾನು ಅನುಭವಿಸಿದ ಮಾನಸಿಕ ಯಾತನೆ ಇಲ್ಲಿ ಅಭಿವ್ಯಕ್ತಿ ಪಡೆದಿದೆ. ನಳಚರಿತ್ರೆ ಕನಕದಾಸರ ಜನಪ್ರಿಯ ಕಾವ್ಯ. ಕಥೆಯ ಚೌಕಟ್ಟು ಮಾತ್ರ ರಚನೆಗಳಲ್ಲಿನ ಸಹಜತೆ, ವರ್ಣನೆಗಳಲ್ಲಿನ ಜಾಗೃತಿ, ಅಲಂಕಾರದ ಭಾರವಿಲ್ಲದೆ ಸರಳ ಸುಂದರ ಶೈಲಿ ಇಲ್ಲಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ನಳ-ದಮಯಂತಿಯರ ತ್ಯಾಗಮಯ ದೈವೀ ಪ್ರೇಮದ ಚಿತ್ರವಿದೆ. ಕನ್ನಡಿಗರಿಗೆ ಪರಿಚಯವಿರುವ ಕಥೆ, ನಾಟಕ, ಕಾವ್ಯ, ಮಹಾಕಾವ್ಯಗಳಾಗಿ ಹುಟ್ಟಿಬಂದಿದ್ದರೂ ಜನಪ್ರಿಯವಾದ ಕಾವ್ಯ ಕನಕದಾಸರ ನಳಚರಿತ್ರೆ. ನಳಮಹಾರಾಜನ ರೂಪ ಸೌಂದರ್ಯ, ಆತನ ನಿಷ್ಠೆ, ಪ್ರಜಾವಾತ್ಸಲ್ಯ ಗುಣಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ. ಹಾಗೆಯೇ ರೂಪಸಿಯಾದ ದಮಯಂತಿ ರಾಜನ ಗುಣಗಾನ ಕೇಳಿ ಆತನಿಗೆ ಒಲಿಯುವ ಸನ್ನಿವೇಶವನ್ನು ಮನೋಜ್ಞನಾಗಿ ತಂದಿದ್ದಾರೆ. ಈ ಕಾವ್ಯದ ರಮಣೀಯ ಭಾಗ 'ಹಂಸದೌತ್ಯ'.

ನಳಚಕ್ರವರ್ತಿ ರಾಜಸಭೆ ನಡೆಸಿದನು. ಆ ಸಭೆ ಗೌಳ, ವಂಗ, ಕಳಿಂಗ, ಕುಂತಳ, ಚೋಳ, ಬರ್ಬರ, ಸಿಂಧು, ಕೇರಳ, ಲಾಳ, ಮಗಧ, ವರಾಳ, ಸೌರಾಷ್ಟ್ರ ರಾಜರುಗಳ ಮಂತ್ರಿಗಳ, ನಟ, ಗಾಯಕ, ಕವಿಗಳ ಸಮೂಹದಿಂದ ತುಂಬಿದ್ದಿತು. ಆ ಸಂದರ್ಭದಲ್ಲಿ ಯಾತ್ರಿಕ ಭೂಸುರರು ಬಂದು ವಿದರ್ಭ ದೇಶ ದೊರೆ ಭೀಮನೃಪ ತನ್ನ ಪೂರ್ವ ಸುಕೃತದ ಫಲವೆಂಬಂತೆ ಸುತೆಯನ್ನು ಪಡೆದಿದ್ದಾನೆ. ಆ ಸತಿಯ ವೈಭವಯುತ ಸೌಂದರ್ಯವನ್ನು ಬಣ್ಣಿಸಲು ಸಾಧ್ಯವಿಲ್ಲ. ಲೋಕದ ಸಾಮಾನ್ಯ ಸ್ತ್ರೀಯಂತಲ್ಲ ದಮಯಂತಿ ವಿಮಲಾಕಾರ, ನಯನುಡಿಗಳಲ್ಲಿ ರೂಪದಲ್ಲಿ ಆಕೆಗೆ ಸಮಾನರನ್ನು ನಾವು ಕಾಣೆವು ಎಂದು ನುಡಿದರು. ಈ ಮಾತುಗಳನ್ನು ಕೇಳಿ ಆಕೆಯ ಸೌಂದರ್ಯಯುತ ಮುಖವನ್ನು ಮನದಲ್ಲಿ ಕಲ್ಪಿಸಿಕೊಳ್ಳುತ್ತಾ ಮನ್ಮಥ ಬಾಧೆಗೆ ಒಳಗಾಗಿ ಆಕೆಯನ್ನು ಎಂತು ಪಡೆವೆನೆಂದು ಚಿಂತಿಸಿದನು. ಹೀಗೆ ದಮಯಂತಿಯ ರೂಪ ಸಾದೃಶ್ಯಗಳನ್ನು ನೆನೆದು ವಿರಹದಿಂದ ಬಳಲಿರಲು ಬೇಟೆಗಾರರನ್ನು ಒಳಗೊಂಡು ವನಚರರು ಬಂದು ಅರಸನನ್ನು ಬೇಟೆಗೆ ಆಹ್ವಾನಿಸಿದರು. ಅರಣ್ಯದಲ್ಲಿ ಬೇಟೆಯಾಡಿ ಬಳಲಿದ ಆಯಾಸವನ್ನು ನೀಗಲು ಉದ್ಯಾನವನ್ನು ಪ್ರವೇಶಿಸಿದನು.

ಅಲ್ಲಿ ಆಯಾಸ ಪರಿಹರಿಸುತ್ತಿರಲು ಶುಭಾಕರೋನ್ನತ ಶುಭ್ರತೇಜದ ರಾಜಹಂಸವನ್ನು ಕಂಡನು. ಅದರ ತೇಜಸ್ಸಿಗೆ ಮನಸೋತು ರಾಜಹಂಸವನ್ನು

ಹಿಡಿದನು. ಆಗ ಆ ಹಂಸೆ ತನ್ನನ್ನು ಕೊಲ್ಲಬಾರದೆಂದು ವಿನಂತಿಸಿತು. 'ಶತ್ರುಗಳನ್ನು ತರಿದಿಕ್ಕುವ ನಿನಗೆ ನಾನು ಅಡವೆ. ಪರಹಿಂಸೆ ನಿನಗೆ ದೋಷವಹುದು. ನೀನು ನನ್ನನ್ನು ತಿಂದರೆ ನಿನ್ನ ಒಡಲಿಗೆ ಅಪ್ಯಾಯನವೇ? ನನ್ನ ಮನೆಯಲ್ಲಿನ ಸತಿಸುತರ ದುಃಖವನ್ನು ಕಂಡು ನನ್ನನ್ನು ಬಿಟ್ಟುಬಿಡು' ಎಂದು ಹೇಳಿತು. ಆಗ ರಾಜ ಆ ಮಾತಿಗೆ ಒಪ್ಪಿ ಹಂಸೆಯನ್ನು ಬಿಡುವನು. ಆಗ ಹಂಸವು, 'ರಾಜ ನೀನು ನನಗೆ ಉಪಕಾರವನ್ನು ಮಾಡಿದ್ದೀಯೆ. ಆದ್ದರಿಂದ ನಿನಗೆ ಉಪಕಾರ ಮಾಡುವೆನು', 'ವಿದರ್ಭ ದೇಶರಾಜ ಭೀಮನ ಪುತ್ರಿ ದಮಯಂತಿ ಮಹಾಸುಂದರಿ, ನಿಪುಣೆ, ಸೊಬಗಿನ ಸೋನೆಯಾಗಿಹಳು. ಅವಳು ನಿನಗೆ ಒಲಿಯುವಂತೆ ಮಾಡುವೆನು' ಎಂದಿತು. ಈ ಮಾತು ಕೇಳಿ ವಿರಹದ ತರಳದಿಂದ ನಳಮಹಾರಾಜನು ಹಂಸವನ್ನು ಕುರಿತು, 'ನಾನು ಮನ್ಮಥ ಬಾಧೆಯಿಂದ ನೊಂದಿದ್ದೇನೆ. ವನಿತೆ ನನಗೆ ಒಲಿಯುವಂತೆ ಮಾಡಿ ಸಲಹು ನನ್ನ ಪ್ರಾಣವನ್ನು' ಎಂದು ಹೇಳುವನು. ಅಂತೆಯೇ ಹಂಸವನ್ನು ತನ್ನ ಹಿಡಿತದಿಂದ ಮುಕ್ತಗೊಳಿಸುವನು.

ಹಂಸ ವಿದರ್ಭದೇಶಕ್ಕೆ ಬಂದು ಅಲ್ಲಿ ದಮಯಂತಿಯನ್ನು ಕಂಡಿತು. ತನ್ನ ಬಳಿ ಬಂದ ಹಂಸವನ್ನು ಹಿಡಿಯಲು ದಮಯಂತಿ ಮುಂದಾಗುವಳು. ಹಂಸೆ ಆಕೆಗೆ ಸಿಗದೆ ಮೆಳೆಯೊಳಗೆ ನುಸುಳಿತು. ಆಯಾಸಗೊಂಡ ದಮಯಂತಿ ನಿರಾಶಳಾಗಿ ನಿಲ್ಲಲು ಹಂಸವು ಆಕೆಯನ್ನು ಕುರಿತು,'ನಾನು ನಳ ಚಕ್ರವರ್ತಿಯ ವಾಹಕನಾಗಿರುವೆನು. ಆತ ನನ್ನನ್ನು ಪ್ರೀತಿಯಿಂದ ಸಲಹುವನು. ಅವನು ನಳಕೂಬರ, ಜಯಂತರಿಗಿಂತ ಚೆಲುವನು: ನಿನ್ನ ಸೌಂದರ್ಯಕ್ಕೆ ಅವನ ಸೌಂದರ್ಯ ಸರಿಸಾಟಿ', ಎಂದು ಹೇಳುವುದು. ಹಂಸೆಯ ಮಾತನ್ನು ಕೇಳಿ ಆ ನಳನೇ ತನ್ನ ಪತಿ, ಉಳಿದ ಪುರುಷರು ಪಿತರೆನಗೆ ಎಂದು ನಾಚಿ ನುಡಿಯುವಳು. ಆಗ ಹಂಸವು ತಾನು ಬಂದ ಕಾರ್ಯವಾಯಿತೆಂದು ಮನದಲ್ಲಿಯೇ ಹಿಗ್ಗಿ ನಳನನ್ನು ನಿನಗೆ ಪತಿಯಾಗಿಸುವೆನೆಂದು ಆಶ್ವಾಸನೆ ನೀಡಿತು. ಆಗ ತಾನು ಬಂದ ಅಂತರಂಗದ ಕಾರ್ಯವನ್ನು ತಿಳಿಸಿ, ಆಕೆಯನ್ನು ಸಮಾಧಾನಗೊಳಿಸಿ ತಾನು ನಿಷಧ ನೃಪಾಲ ನಳನ ಚಿಂತೆಯನ್ನು ಪರಿಹರಿಸಬೇಕೆಂದು ಅಲ್ಲಿಂದ ಹೊರಟಿತು. ಇತ್ತ ನಳಮಹಾರಾಜನಿಗೆ ಬಲಭುಜ, ಬಲಗಣ್ಣು ಅಲುಗಿದವು. ಇದರ ಫಲವೇನೆಂದು ಭೂಸುರರನ್ನು ಕೇಳುತ್ತಿರಲು ಆ ಸಮಯಕ್ಕೆ ಸರಿಯಾಗಿ ಹಂಸ ಅಲ್ಲಿಗೆ ಬಂತು. ಆಗ ನಳನು ಕಾತರದಿಂದ ಹಂಸವನ್ನು "ಲಲನೆಯನ್ನು ಕಂಡೆಯಾ? ಆಕೆಯ ಮನಸ್ಸಿನ ಪರಿ ಎಂತು" ಎಂದು ಕೇಳಿದನು. ಹಂಸ "ನಿನ್ನ ಮೇಲಣ ಪ್ರೀತಿಯಿಂದ ಆಕೆಯೂ ವಿರಹ ಪೀಡಿತಳಾಗಿ ಮನಸೋತು ನಳನೇ ತನ್ನ ಪತಿಯೆಂದು ನಂಬಿಹಳು" ಎಂದು ನುಡಿಯಿತು. ಮುಂದುವರೆದು, "ಎಲೆ ರಾಜನೇ ದಮಯಂತಿ ನಿನಗೆ ಒಲಿಯುವಂತೆ ಮಾಡಿ ಬಂದಿದ್ದೇನೆ. ನನ್ನ ಭಾಷೆ ಸಂದಿತು. ನನ್ನನ್ನು ಬಿಡು ಆಕೆಯನ್ನು ವಿವಾಹವಾಗು" ಎಂದು ಹೇಳಲು ನಳನು "ನನಗಾಗಿ ಬಹಳ ನೊಂದೆ ನೀನು ನಿನ್ನನ್ನು ಮುಕ್ತಗೊಳಿಸಿದ್ದೇನೆ. ಹೋಗು"

ಎಂದು ಹಂಸವನ್ನು ಬಿಟ್ಟು ಬಿಡುವನು. ಹೀಗೆ ಹಂಸದ ದೌತ್ಯದಿಂದ ನಳನನ್ನು ಕಾಣದ ದಮಯಂತಿ, ದಮಯಂತಿಯನ್ನು ಕಾಣದ ನಳ ಪರಸ್ಪರ ಅನುರಾಗಿಗಳಾಗುವರು. ಈ ರಾಯಭಾರವನ್ನು ಕನಕದಾಸರು ಮನೋಜ್ಞವಾಗಿ ವಿವರಿಸಿದ್ದಾರೆ.

**ಕನಕದಾಸರ ಕೀರ್ತನೆಗಳ ಆಧುನಿಕ ಅಂಶಗಳು:**

ಕನಕದಾಸರ ಕೀರ್ತನೆಗಳು 15ನೇ ಶತಮಾನದಲ್ಲಿ ರಚಿತವಾಗಿದ್ದರೂ, ಅವುಗಳಲ್ಲಿರುವ ಕೆಲವು ಅಂಶಗಳು ಇಂದಿಗೂ ಪ್ರಸ್ತುತವಾಗಿವೆ ಮತ್ತು ಆಧುನಿಕ ಸಮಾಜದ ಸಮಸ್ಯೆಗಳಿಗೆ ಮತ್ತು ಮೌಲ್ಯಗಳಿಗೆ ಹತ್ತಿರವಾಗಿವೆ. ಜಾತಿರಹಿತ ಸಮಾಜದ ಪರಿಕಲ್ಪನೆಯನ್ನು ಕನಕದಾಸರು ತಮ್ಮ ಪ್ರಸಿದ್ಧ ಕೀರ್ತನೆ "ಕುಲ ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?" ಮೂಲಕ ಜಾತಿ ಪದ್ಧತಿಯ ಅಸಂಬದ್ಧತೆಯನ್ನು ಪ್ರಶ್ನಿಸಿದ್ದಾರೆ. ಆಧುನಿಕ ಸಮಾಜದಲ್ಲಿ ಜಾತಿ ತಾರತಮ್ಯ ಇನ್ನೂ ಬೇರೂರಿದ್ದರೂ, ಸಮಾನತೆ ಮತ್ತು ಜಾತಿರಹಿತ ಸಮಾಜದ ಕಲ್ಪನೆಯು ಪ್ರಮುಖ ಮೌಲ್ಯವಾಗಿ ಗುರುತಿಸಲ್ಪಟ್ಟಿದೆ. ಕನಕದಾಸರ ಈ ಸಂದೇಶವು ಶತಮಾನಗಳ ಹಿಂದೆಯೇ ಜಾತಿ ಭೇದದ ನಿರರ್ಥಕತೆಯನ್ನು ಸಾರಿದೆ, ಇದು ಇಂದಿನ ಜಾಗತಿಕ ಸಮಾಜದಲ್ಲಿಯೂ ಪ್ರಸ್ತುತವಾಗಿದೆ.

**ಸಾಮಾಜಿಕ ಸಮಾನತೆ ಮತ್ತು ಮಾನವೀಯ ಮೌಲ್ಯಗಳು:**

ಕನಕದಾಸರು ಸಮಾಜದಲ್ಲಿನ ಮೇಲು-ಕೀಳು, ಬಡವ-ಶ್ರೀಮಂತ ಎಂಬ ಭೇದಭಾವಗಳನ್ನು ಕಟುವಾಗಿ ಟೀಕಿಸಿದ್ದಾರೆ. "ರಾಮಧಾನ್ಯ ಚರಿತೆ" ಕಾವ್ಯದಲ್ಲಿ ಭತ್ತ ಮತ್ತು ರಾಗಿಯ ನಡುವಿನ ಸಂಭಾಷಣೆಯ ಮೂಲಕ, ಜಾತಿಯ ಆಧಾರದ ಮೇಲೆ ಮನುಷ್ಯರನ್ನು ಅಳೆಯುವುದು ತಪ್ಪು ಎಂದು ತೋರಿಸಿಕೊಟ್ಟಿದ್ದಾರೆ. ರಾಗಿಯನ್ನು ಕೀಳು ಎಂದು ಪರಿಗಣಿಸಲಾಗಿದ್ದ ಕಾಲದಲ್ಲಿ, ರಾಗಿಯೇ ಶ್ರೇಷ್ಠ ಎಂದು ಪ್ರತಿಪಾದಿಸಿ, ಸಮಾಜದಲ್ಲಿನ ಅಸಮಾನತೆಯನ್ನು ಪ್ರಶ್ನಿಸಿದ್ದಾರೆ. ಇಂತಹ ವಿಚಾರಗಳು ಆಧುನಿಕ ಮಾನವ ಹಕ್ಕುಗಳ ಪರಿಕಲ್ಪನೆ ಮತ್ತು ಸಮಾನತೆಯ ಮೌಲ್ಯಗಳೊಂದಿಗೆ ಹೊಂದಿಕೆಯಾಗುತ್ತವೆ.

**ವೈಯಕ್ತಿಕ ಭಕ್ತಿ ಮತ್ತು ಆಂತರಿಕ ಶುದ್ಧತೆಯನ್ನು ಮನಗಂಡ:**

ಕನಕದಾಸರು ಬಾಹ್ಯ ಆಚರಣೆಗಳು ಮತ್ತು ಮೂಢನಂಬಿಕೆಗಳಿಗಿಂತ ಆಂತರಿಕ ಭಕ್ತಿ ಮತ್ತು ಶುದ್ಧತೆಗೆ ಹೆಚ್ಚು ಒತ್ತು ನೀಡಿದ್ದಾರೆ. ದೇವಾಲಯಗಳಿಗೆ ಹೋಗಿ ಆಚರಣೆಗಳನ್ನು ಮಾಡುವುದಕ್ಕಿಂತ ಮನಸ್ಸಿನಿಂದ ದೇವರನ್ನು ನೆನೆಯುವುದು ಮುಖ್ಯ ಎಂದು ಸಾರಿದ್ದಾರೆ. ಆಧುನಿಕ ಜೀವನದಲ್ಲಿಯೂ, ಧರ್ಮದ ಮೂಲಭೂತ

ತತ್ವಗಳನ್ನು ಅರ್ಥಮಾಡಿಕೊಳ್ಳುವ ಮತ್ತು ವೈಯಕ್ತಿಕ ನಂಬಿಕೆಗೆ ಪ್ರಾಮುಖ್ಯತೆ ನೀಡುವ ಪ್ರವೃತ್ತಿ ಹೆಚ್ಚುತ್ತಿದೆ. ಅವರ ಕೀರ್ತನೆಗಳು ಆತ್ಮಾವಲೋಕನ ಮತ್ತು ವೈಯಕ್ತಿಕ ಬೆಳವಣಿಗೆಗೆ ಪ್ರೇರಣೆ ನೀಡುತ್ತವೆ.

ಕನಕದಾಸರು ಸಮಾಜದಲ್ಲಿನ ತಪ್ಪು ಆಚರಣೆಗಳು ಮತ್ತು ಮೌಢ್ಯಗಳನ್ನು ವಿಡಂಬನಾತ್ಮಕವಾಗಿ, ಹಾಸ್ಯಮಯವಾಗಿ ತಮ್ಮ ಕೀರ್ತನೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಇದರಿಂದ ಅವರು ಜನಸಾಮಾನ್ಯರಿಗೆ ಹತ್ತಿರವಾಗಿದ್ದಾರೆ ಮತ್ತು ಅವರ ಸಂದೇಶಗಳು ಹೆಚ್ಚು ಪರಿಣಾಮಕಾರಿಯಾಗಿ ತಲುಪಿವೆ. ಆಧುನಿಕ ಕಾಲದಲ್ಲಿಯೂ, ಸಾಮಾಜಿಕ ಟೀಕೆಯನ್ನು ಹಾಸ್ಯದ ಮೂಲಕ ವ್ಯಕ್ತಪಡಿಸುವ ಪ್ರವೃತ್ತಿ ಇದೆ, ಇದು ಜನರಿಗೆ ವಿಷಯವನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಕನಕದಾಸರ ಕೀರ್ತನೆಗಳು ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಕನ್ನಡ ಭಾಷೆಯಲ್ಲಿವೆ. ಅವುಗಳಲ್ಲಿ ಜಾನಪದ ಸೊಗಡು, ಆಡು ಭಾಷೆಯ ಅಂಶಗಳು ಇರುವುದನ್ನು ಕಾಣಬಹುದು. ಇದರಿಂದ ಅವರ ಸಂದೇಶಗಳು ಸುಲಭವಾಗಿ ಜನರನ್ನು ತಲುಪಿವೆ. ಆಧುನಿಕ ಸಂವಹನದಲ್ಲಿಯೂ, ಸರಳ ಮತ್ತು ಸ್ಪಷ್ಟ ಭಾಷೆಯಲ್ಲಿ ವಿಷಯಗಳನ್ನು ತಲುಪಿಸುವುದು ಅತ್ಯಗತ್ಯ. "ತಲ್ಲಣಿಸದಿರು ಕಂಡ್ಯ ತಾಳು ಮನವೇ" ನಂತಹ ಕೀರ್ತನೆಗಳು ಮನುಷ್ಯನ ಮನಸ್ಸಿನ ಸ್ಥಿತಿ, ಅಹಂಕಾರದ ನಿರರ್ಥಕತೆ ಮತ್ತು ಶಾಂತಿಯ ಮಹತ್ವವನ್ನು ಸಾರುತ್ತವೆ. ಆಧುನಿಕ ಜೀವನಶೈಲಿಯಲ್ಲಿನ ಒತ್ತಡಗಳು ಮತ್ತು ಮಾನಸಿಕ ಸಮಸ್ಯೆಗಳಿಗೆ ಅವರ ಕೀರ್ತನೆಗಳು ಮಾನಸಿಕ ನೆಮ್ಮದಿ ಮತ್ತು ಸಮಚಿತ್ತತೆಯನ್ನು ನೀಡುವ ಮಾರ್ಗದರ್ಶನವಾಗಿವೆ. ಸ್ವಯಂ ಅರಿವು, ಆಂತರಿಕ ಶಾಂತಿ ಮತ್ತು ಅಹಂಕಾರವನ್ನು ತ್ಯಜಿಸುವ ಮಹತ್ವವು ಆಧುನಿಕ ಆಧ್ಯಾತ್ಮಿಕ ಚಿಂತನೆಗಳಲ್ಲಿ ಪ್ರಮುಖ ಸ್ಥಾನ ಪಡೆದಿವೆ.

ಕನಕದಾಸರ ಕೀರ್ತನೆಗಳು ಕೇವಲ ಭಕ್ತಿಗೀತೆಗಳಾಗಿ ಉಳಿದಿಲ್ಲ. ಅವು ಸಾರ್ವಕಾಲಿಕ ಮೌಲ್ಯಗಳನ್ನು ಹೊಂದಿದ್ದು, ಸಾಮಾಜಿಕ ಸುಧಾರಣೆ, ಮಾನವೀಯ ಸಮಾನತೆ ಮತ್ತು ಆಂತರಿಕ ಶಾಂತಿಯ ಕುರಿತಾದ ಅವರ ಆಲೋಚನೆಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ಕೀರ್ತನೆಗಳಲ್ಲಿ ಅಡಗಿರುವ ತತ್ವಗಳು ಆಧುನಿಕ ಸಮಾಜದ ಪ್ರಗತಿಪರ ಚಿಂತನೆಗಳಿಗೆ ಪೂರಕವಾಗಿವೆ. ಕನಕದಾಸರ ಕೀರ್ತನೆಗಳು ಹಿಂದಿನ ಕಾಲದ ಭಕ್ತಿ ಪರಂಪರೆಯ ಆಳವಾದ ಬೇರುಗಳನ್ನು ಹೊಂದಿದ್ದರೂ, ಅವು ಸಮಕಾಲೀನ ಸಮಾಜದ ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಆಧುನಿಕ ಮತ್ತು ಪ್ರಗತಿಪರ ಪರಿಹಾರಗಳನ್ನು ಸೂಚಿಸಿವೆ. ಜಾತಿ, ಧರ್ಮ, ಮತ್ತು ಸಾಮಾಜಿಕ ಅಸಮಾನತೆಗಳಂತಹ ವಿಷಯಗಳ ಕುರಿತಾದ ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿದ್ದು, ಆಧುನಿಕ ಸಮಾಜಕ್ಕೆ ದಾರಿದೀಪವಾಗಿವೆ.

**ಪರಾಮರ್ಶನ ಗ್ರಂಥಗಳು:**


1. ರುದ್ರಮೂರ್ತಿ ಶಾಸ್ತ್ರಿಶಾಸ್ತ್ರಿ ಸು., (2017), ಕನಕದಾಸ, ಐ ಬಿ ಎಚ್ ಪ್ರಕಾಶನ, ಬೆಂಗಳೂರು.
2. ಮುಗಳಿ ರಂ.ಶ್ರೀ., ರಂಗನಾಥ್ ಎಚ್.ಕೆ., & ಕೃಷ್ಣಮೂರ್ತಿ ಶಾಸ್ತ್ರಿ ಎಚ್.ಎಸ್. (ಸಂ), (1984), ದಾಸ ಸಾಹಿತ್ಯ ದರ್ಶನ, ಮಂಗಳಭಾರತಿ ಪ್ರಕಾಶನ, ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.